

# ಬಣ್ಣ ಮಾಸಿದ ಬದುಕು

ಸ್ಥಾವರಕ್ಕಳಿವಿಲ್ಲ
ಎಂದುಕೊಂಡವರು
ಭಾರಿ ಕಟ್ಟಡಕ್ಕೆ
ಜೋತು ಬಿದ್ದವರು

ವರ್ಗ ವರ್ಣದ
ತಡೆಗೋಡೆಗೂ
ಬಣ್ಣ ಬಳಿಯುವವರು

ಯಾರದೋ ಸೂತ್ರಕ್ಕೆ
ಬದುಕು ಸಿಕ್ಕಿಸಿದವರು

ಕುಳಿತ ಹಲಗೆಯಲ್ಲಿಯೇ
ನೆಲೆ ಕಂಡವರು

ಆರಕ್ಕೇರದೆ
ಮೂರಕ್ಕಿಳಿಯದೆ

ಇದ್ದಲ್ಲಿಯೇ ಇರಲು
ಸೆಣಸುವವರು

ಕಾಯಕ ತಪ್ಪಿದರೆ
ಕೈಲಾಸ ಸೇರುವವರು

ರಂಗಿನರಮನೆಗೆ
ಬೆವರ ತೋರಣ ಕಟ್ಟಿ
ಬಣ್ಣ ಮಾಸಿದ ಬದುಕು ದೂಡುತಿಹರು

**ಸಾವಿತ್ರಿ ಮುಜುಮದಾರ**

# ಅನಿಸಿಬಿಡುತ್ತದೆ ಕೆಲವೊಮ್ಮೆ

ನಮ್ಮ ಸುತ್ತಲೂ ಏಣಿಗಳಿವೆ,
ಆದರೂ ನಮ್ಮ ರೊಟ್ಟಿಗಳು
ಮೋಡಗಳ ಮೇಲೆ ಇವೆ.

ನಮ್ಮ ಸುತ್ತಲೂ ವರ್ಣಗಳಿವೆ,
ಆದರೂ ನಮ್ಮ ಆತ್ಮಗಳು
ಇದ್ದಿಲಿನಿಂದ ತುಂಬಿವೆ.

ಪ್ರತಿ ದಿನ ರೊಟ್ಟಿಗಾಗಿ,
ಆಕಾಶದಿಂದ ಧರೆಗೆ
ಹಗ್ಗದಲ್ಲಿ ತೂಗುತ್ತೇವೆ.

ನಮ್ಮ ಕುಟುಂಬಕ್ಕಾಗಿ,
ಇತರರ ಕನಸುಗಳಿಗೆ
ಬಣ್ಣ ಹಚ್ಚುತ್ತೇವೆ.

ಅನಿಸಿಬಿಡುತ್ತದೆ ಕೆಲವೊಮ್ಮೆ,
ಈ ಜೀವನವು ಹುಚ್ಚುತನದ
ಕುಂಚವಲ್ಲದೆ ಬೇರೇನೂ ಅಲ್ಲ.

**ಎಂ.ಎನ್. ಮೂರ್ತಿ**